ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು: ಶ್ರೀ ಎಸ್. ಎಂ. ಕೃಷ್ಣ ರವರು ಹಾಗೂ ಶ್ರೀ ಆರ್. ರೋಷನ್‌ಬೇಗ್‌ರವರು ಅನುಮೋದಿಸಿರುವ ಪ್ರಸ್ತಾವ ಈ ರೀತಿ ಇದೆ.

"ಶ್ರೀ ಮನೋಹರ ಹೆಚ್. ತಹಶೀಲ್ದಾರ್‌ರವರನ್ನು11ನೇಯ ವಿಧಾನ ಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸುವುದು."

ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು ಶ್ರೀ ಮನೋಹರ ಹೆಚ್. ತಹಶೀಲ್ದಾರ್‌ರವರನ್ನು ಉಪಾಧ್ಯಕ್ಷರನ್ನಾಗಿ ಚುನಾಯಿಸಲಾಯಿತು.

ಅಧ್ಯಕ್ಷರು: ಮಾನ್ಯ ಸಭಾ ನಾಯಕರಾದ ಮುಖ್ಯ ಮಂತ್ರಿಗಳು ಹೊಸದಾಗಿ ಆಯ್ಕೆಯಾಗಿರುವ ಸದನದ ಉಪಾಧ್ಯಕ್ಷರನ್ನು ಕುರಿತು ಒಂದೆರಡು ಮಾತನ್ನಾಡಬೇಕು.

+ಶ್ರೀ ಎಸ್. ಎಂ. ಕೃಷ್ಣ (ಮುಖ್ಯ ಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಈ ಸದನದ ಮಾನ್ಯ ಸದಸ್ಯರಾದ ಶ್ರೀ ಮನೋಹರ್ ತಹಶೀಲ್ದಾರ್ ರವರನ್ನು ಸರ್ವಾನುಮತದಿಂದ ಉಪಾಧ್ಯಕ್ಷರನ್ನಾಗಿ ಚುನಾವಣೆ ಮಾಡಿದ್ದಕ್ಕಾಗಿ ಸದನದ ಎಲ್ಲಾ ಸದಸ್ಯರನ್ನು ನಾನು ಮೊಟ್ಟಮೊದಲನೆಯದಾಗಿ ಅಭಿನಂದಿಸುತ್ತೇನೆ. ಶ್ರೀಯುತ ಮನೋಹರ್ ತಹಶೀಲ್ದಾರ್ ರವರು ಹತ್ತಾರು ವರ್ಷಗಳ ಕಾಲ ನಮ್ಮ ರಾಜ್ಯದ ರಾಜಕಾರಣದಲ್ಲಿ ಅತ್ಯಂತ ಕ್ರಿಯಾಶಾಲಿಯಾಗಿ ಭಾಗವಹಿಸಿದ್ದಾರೆ. ಕಾಂಗ್ರೆಸ್ ಪಕ್ಷದ, ಆ ಜಿಲ್ಲೆಯ ಅಧ್ಯಕ್ಷರಾಗಿ, ಹಿಂದೆ ಎರಡು ಬಾರಿ ಶಾಸನಸಭೆಗೆ ಚುನಾಯಿತರಾಗಿ ಮತ್ತೆ ಈ ಬಾರಿ ಶಾಸನಸಭೆಯ ಒಳಗೆ ಬಂದು ಈ ಸದನದ ಎರಡನೆಯ ಅತ್ಯಂತ ಮಹತ್ತರವಾದ ಸ್ಥಾನವನ್ನು ಅವರು ಇವೊತ್ತು ಅಲಂಕರಿಸಿದ್ದಾರೆ. ಸತ್ಸಂಪ್ರದಾಯಗಳ ವಿಚಾರವನ್ನು ನಾವು ಮಾತನಾಡಿದ್ದೇವೆ. ತಾವು ಈ ಸತ್ಸಂಪ್ರದಾಯಗಳಿಗೆ ಒಂದು ದೊಡ್ಡ ಆಯಾಮವನ್ನು ಈಗಾಗಲೇ ಹಾಕಿಕೊಟ್ಟಿದ್ದೀರಿ ಎನ್ನತಕ್ಕಂಥದ್ದನ್ನು ನಾನು ನಮ್ರತೆಯಿಂದ ನೆನೆಸಿಕೊಳ್ಳುತ್ತೇನೆ. ತಾವು ಅಧ್ಯಕ್ಷರಾದ ದಿವಸ ನನಗೆ ಒಂದು ಪತ್ರವನ್ನು ಬರೆದು ನಮ್ಮ ಪಕ್ಷದ ಸದಸ್ಯತ್ವಕ್ಕೆ ಮತ್ತು ತಾವು ಯಾವ ಸಂಸ್ಥೆಗೆ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದಿರೋ ಆ ಸಂಸ್ಥೆಗೆ ತಾವು ರಾಜೀನಾಮೆಯನ್ನು ಕೊಟ್ಟಿರಿ. ಆ ರಾಜೀನಾಮೆಯನ್ನು ನಾನು ಅಂಗೀಕರಿಸಿದ್ದೇನೆ ಸತ್ಸಂಪ್ರದಾಯಗಳನ್ನು ಏನು ಹಾಕಬೇಕೋ ಅದನ್ನು ಹಾಕುವುದರಲ್ಲಿ ಕಾಂಗ್ರೆಸ್ ಪಕ್ಷದವರು ಯಾರಿಗೂ ಕೂಡ ಹಿಂದೆ ಇಲ್ಲ ಎನ್ನುವುದನ್ನು ತಾವು ಈ ದಿವಸ ತೋರಿಸಿಕೊಟ್ಟಿದ್ದೀರಿ. ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ನಮ್ಮ ಜೊತೆಯಲ್ಲಿ ಚರ್ಚೆ ಮಾಡಬೇಕಾಗಿತ್ತು ಎನ್ನುವ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ತಮ್ಮ ಚುನಾವಣೆಯ ಸಮಯದಲ್ಲಿ ನಾನು ಹೇಳಿದ ಒಂದು ಮಾತಿಗೆ ಅತಿರಂಜಿತವಾದಂಥ ಉಲ್ಲೇಖ, ವಿಶ್ಲೇಷಣೆ ಈ ಸದನದಲ್ಲಿ ಆಗಿದ್ದಾಗ್ಗೆ ಜರುಗುತ್ತಿದೆ. ಏನೋ ನಾನು ಹಿಮಾಲಯ ಎತ್ತರದ ತಪ್ಪನ್ನು ಮಾಡಿಬಿಟ್ಟಿದ್ದೇನೆ, ಆ ತಪ್ಪಿಗೋಸ್ಕರ ನಾನು ಪಶ್ಚಾತಾಪಪಟ್ಟೆ, ಎಷ್ಟು ಸಾರಿ ನಿಮ್ಮನ್ನು ಕ್ಷಮಿಸುವುದು ಎಂದು ಹೇಳಿ ಮಾನ್ಯ ಸಿಂಧ್ಯಾರವರು ತಮ್ಮ ಭಾಷಣದ ಸಮಯದಲ್ಲಿ ತಮ್ಮ ಅಗಾಧವಾದ ಅನುಭವದ ಹಿನ್ನೆಲೆಯಲ್ಲಿ ಹೇಳಿದರು ಕೆಲವು ಸೌಜನ್ಯಕ್ಕೋಸ್ಕರ ನಾವು ಹೇಳುತ್ತೇವೆ. ಆದರೆ ಅದನ್ನೇ ದೊಡ್ಡ ತಪ್ಪು ಎಂದು ಹೇಳಿ

ತಾವು ಭಾವಿಸಿಕೊಳ್ಳಬಾರದು.ಆಗ ನಾವು ಆ ಸೌಜನ್ಯಮೀರಿ ನಡೆಯುವ ಹಾಗೆ ವರ್ತನೆ ಮಾಡಬೇಕಾದ ಪರಿಸ್ಥಿತಿ ಬರಬಹುದು. ಆದರೆ ಆ ರೀತಿ ಬರಬಾರದು ಎನ್ನುವುದೇ ನನ್ನ ಇಚ್ಛೆ ಇನ್ನು ಯುವ ಶಾಸಕರಾದ ಶ್ರೀ ವಿಶ್ವೇಶ್ವರ ಹೆಗಡೆಯವರು ತಮ್ಮ ಭಾಷಣದಲ್ಲಿ ಶ್ರೀಮಾನ್ ಮನೋಹರ್ ತಹಶೀಲ್ದಾರ್‌ರವರ ಬಗ್ಗೆ ಬಹಳ ವಿಶ್ವಾಸದ ಮಾತುಗಳನ್ನು ಆಡಿದ್ದಾರಲ್ಲದೇ ಇನ್ನೂ ಒಂದು ಹೆಜ್ಜೆ ಅವರು ಮುಂದೆ ಹೋಗಿ ಈ ದಿವಸ ಸರ್ವಾನುಮತದಿಂದ ಉಪಾಧ್ಯಕ್ಷರ ಆಯ್ಕೆ ಆಗುವುದಕ್ಕೆ ಪ್ರಯತ್ನವನ್ನು ಮಾಡಿದ್ದೀರಿ. ಅದೇ ರೀತಿ ವಿರೋಧ ಪಕ್ಷದ ನಾಯಕರು, ಜನತಾ ದಳದ ಸಂಯುಕ್ತ ಪಕ್ಷದ ನಾಯಕರು, ಜನತಾ ದಳ ಜಾತ್ಯಾತೀತ ಪಕ್ಷದ ನಾಯಕರು ಹಾಗೂ ಶಿವಪ್ಪನವರೂ ಕೂಡ ಸಹಕರಿಸಿದ್ದಾರೆ. ಆದರೆ ಇವ್ಹೊತ್ತು ಅವರು ಯಾರಿಗೆ ನಾಯಕರಾಗಿದ್ದಾರೋ ನನಗೆ ಗೊತ್ತಿಲ್ಲ ಒಟ್ಟಿನಲ್ಲಿ ಅವರು ಸಹಕಾರವನ್ನು ಕೊಟ್ಟಿದ್ದಾರೆ. ಇವರುಗಳಲ್ಲದೇ ಯಾವ ಪಕ್ಷಕ್ಕೂ ಸೇರದ ಪಕ್ಷೇತರರುಗಳಲ್ಲಿ ಕೆಲವರಾದ ಶಾಂತನಗೌಡರು, ವಡ್ನಾಳ್ ರಾಜಣ್ಣನವರು, ಗೋವಿಂದಪ್ಪನವರು ಹಾಗೂ ಜಯಪ್ರಕಾಶ್ ಹೆಗಡೆಯವರು ಕೂಡ ಶ್ರೀ ಮನೋಹರ್ ತಹಶೀಲ್ದಾರ್‌ರವರನ್ನೇ ಉಪಾಧ್ಯಕ್ಷರನ್ನಾಗಿ ಮಾಡಬೇಕೆಂದು ತಮ್ಮ ಸೂಚನೆಗಳನ್ನು ಕೂಡ ಮಂಡಿಸಿದ್ದಾರೆ. ಅವರಿಗೂ ಕೂಡ ವಿಶೇಷವಾಗಿ ಧನ್ಯವಾದಗಳನ್ನು ಸಮರ್ಪಣೆ ಮಾಡುವುದಕ್ಕೆ ಈ ಅವಕಾಶವನ್ನು ಉಪಯೋಗಿಸಿಕೊಳ್ಳುತ್ತೇನೆ. ಸುಗಮವಾಗಿ ಈ ಸದನದ ಕಲಾಪಗಳು ನಡೆಯಬೇಕು ಎಂಬುದು ನಮ್ಮ ಇಚ್ಛೆ ಹಾಗೂ ನಿಮ್ಮ ಇಚ್ಛೆ ಹಾಗೂ ಸದನದ ಎಲ್ಲಾ ಸದಸ್ಯರ ಇಚ್ಛೆಯೂ ಕೂಡ ಆಗಿದೆ. ಸುಗಮವಾಗಿ ಸದನದ ಕಾರ್ಯಕಲಾಪಗಳು ನಡೆಯಬೇಕೆಂದರೆ ನಮ್ಮನ್ನು ಉಪಾಧ್ಯಕ್ಷರನ್ನಾಗಿ ಮಾಡಿದರೆ ಅದು ಸಾಧ್ಯವಾಗುತ್ತದೆ ಎನ್ನತಕ್ಕಂಥ ವಾದವನ್ನು ನೀವು ಮಂಡಿಸಲಿಲ್ಲ ಎನ್ನತಕ್ಕಂಥದ್ದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಒಟ್ಟಾರೆ ನಾವು ಒಂದು ತೀರ್ಮಾನವನ್ನು ಈ ವಿಚಾರದಲ್ಲಿ ತೆಗೆದುಕೊಂಡಿದ್ದೇವೆ. ಅದಕ್ಕೆ ತಾವು ಸಹಮತವನ್ನು ವ್ಯಕ್ತಪಡಿಸಿದ್ದೀರಿ. ಅದಕ್ಕೆ ನಿಮಗೆಲ್ಲರಿಗೂ ಕೂಡ ನಾನು ಅಭಾರಿಯಾಗಿದ್ದೇನೆ. ಇನ್ನು ಮುಂದೆ ಸತ್ಸಂಪ್ರದಾಯಗಳು ಎಂಬ ವಿಷಯ ಮುಂದೆ ಬಂದಾಗ ಯಾವುದು ಸತ್ಸಂಪ್ರದಾಯ ಎಂಬುದರಲ್ಲಿ ನಮ್ಮಲ್ಲಿ ಏಕ ಭಾವನೆ ಮೂಡಿ ಬಂದಾಗ ಆಗ ಸತ್ಸಂಪ್ರದಾಯಗಳನ್ನು ನಮಗೆ ತೋರಿದ ರೀತಿಯಲ್ಲಿ ನಾವು ಈ ಸದನಕ್ಕೆ ಹಾಕತಕ್ಕಂಥ ಅವಕಾಶಗಳು ನಮಗೆ ಮುಂದೆ ಸಿಗುತ್ತವೆ ಎನ್ನತಕ್ಕಂಥ ಮಾತನ್ನು ಸೂಚ್ಯವಾಗಿ ನಾನು ಈ ದಿವಸ ತಮ್ಮಲ್ಲಿ ಹೇಳಿಕೋಳ್ಳುತ್ತಿದ್ದೇನೆ. ಶ್ರೀ ಮನೋಹರ್ ತಹಶೀಲ್ದಾರ್‌ರವರು ಉಪಾಧ್ಯಕ್ಷರಾಗಿ ಈ ಸದನದ ಗಾಂಭೀರ್ಯ ಹಾಗೂ ಘನತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೆಲಸವನ್ನು ಮಾಡುತ್ತಾರೆಂದು ಆಶಿಸುತ್ತೇನೆ.

ಶ್ರೀ ಸಿ. ಬೈರೇಗೌಡ: ತಹಶೀಲ್ದಾರ್‌ರವರನ್ನು ತಾವು ಅಸಿಸ್ಟೆಂಟ್ ಕಮೀಶನರ್‌ರನ್ನಾಗಿ, ಡೆಪ್ಯುಟಿ ಕಮೀಶನರ್‌ರನ್ನಾಗಿ ತಾವು ಮಾಡುವುದೇನಾದರೂ ಇದ್ದರೆ ಅದನ್ನು ಯಾವಾಗ ಮಾಡುತ್ತೀರಿ ಎಂಬುದನ್ನು ಹೇಳಿದರೆ ಒಳ್ಳೆಯದು. ಏಕೆಂದರೆ ಮನೋಹರ್ ತಹಸೀಲ್ದಾರ್‌ರವರು ಬರೇ ತಹಸೀಲ್ದಾರ್ ಆಗಿರಬಾರದು ಎಂಬುದು ನಮ್ಮ ಇಚ್ಛೆ.

ಶ್ರೀ ಎಸ್. ಎಂ. ಕೃಷ್ಣ : ತಹಶೀಲ್ದಾರ್‌ರವರು ಮನೋಹರವಾಗಿದ್ದಾರೆ. ಆದರೆ ನೀವು ಆಗಿಂದ್ದಾಗ್ಗೆ ಕೊಡತಕ್ಕಂಥ ಸಲಹೆಗಳನ್ನು ನಾವು ಗಮದಲ್ಲಿಟ್ಟುಕೊಂಡೇ ಇರುತ್ತೇನೆ. ಮಂತ್ರಿಮಂಡಲದ ಗಾತ್ರದ ಬಗ್ಗೆ ತಾವು ಉಪದೇಶವನ್ನು ನೀಡಿದ್ದೀರಿ, ಸಲಹೆಗಳನ್ನು ನೀಡಿದ್ದೀರಿ,

ಸೂಚನೆಗಳನ್ನು ಕೊಟ್ಟಿದ್ದೀರಿ, ಟೀಕೆಗಳನ್ನೂ ಕೂಡ ಮಾಡಿದ್ದೀರಿ ಎಲ್ಲಿ ಕ್ಲಾಶ್ ಆಯಿತು ಎಂಬ ಬಗ್ಗೆ ತಮ್ಮ ಅನಿಸಿಕೆಗಳನ್ನೂ ಹೇಳಿದ್ದೀರಿ. ಅದೆಲ್ಲವನ್ನೂ ಕೂಡ ನಾನು ಇಲ್ಲಿ ರಿಜಿಸ್ಟರ್ ಮಾಡಿಕೊಂಡಿದ್ದೇನೆ. ತಹಶೀಲ್ದಾರ್‌ರವರಿಗೆ ಡೆಪ್ಯುಟಿ ಕಮೀಶನರ್‌ರೆಂದು ಪ್ರಮೋಶನ್ ಕೊಡಬೇಕೆಂದು ಶ್ರೀ ಭೈರೇಗೌಡರು ಹೇಳಿದ್ದಾರೆ. ಭವಿಷ್ಯದ ಗರ್ಭದಲ್ಲಿ ಎನೇನು ಅಡಗಿದೆ ಎಂಬುದು ನನಗೂ ಗೊತ್ತಿಲ್ಲ ಹಾಗೂ ನಿಮಗೂ ಗೊತ್ತಿಲ್ಲ. ಆದುದರಿಂದ ಆ ಮಾತನ್ನು ಅಲ್ಲಿಗೆ ಬಿಟ್ಟು ಮನೋಹರ್ ತಹಶೀಲ್ದಾರ್‌ರವರಿಗೆ ಶುಭವನ್ನು ಕೋರಿ ವಿರೋಧ ಪಕ್ಷದ ನಾಯಕರಿಗೆ ಹಾಗೂ ಸದನದ ಎಲ್ಲ ಪಕ್ಷಗಳ ಮುಖಂಡರಿಗೆ ತಾವು ತೋರಿದಂಥ ಈ ವ್ಯವಧಾನಕ್ಕೆ ನಾನು ಋಣಿಯಾಗಿದ್ದೇನೆಂದು ಹೇಳಿ ಮತ್ತೊಮ್ಮೆ ತಮಗೆ ಹಾರ್ದಿಕವಾದಂಥ ಅಭಿನಂದನೆಯನ್ನು ಸಲ್ಲಿಸುತ್ತೇನೆ.

10.30 ಎ ಎಂ

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಶ್ರೀಯುತ ಮನೋಹರ್ ತಹಶೀಲ್ದಾರ್‌ರವರು ಸರ್ವಾನುಮತದಿಂದ ಇವತ್ತು ಈ ಸದನದ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಕ್ಕೆ ನಾನು ನಮ್ಮೆಲ್ಲ ವಿರೋಧ ಪಕ್ಷದ ಶಾಸಕರ ಪರವಾಗಿ ಅತ್ಯಂತ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಶ್ರೀ ಮನೋಹರ್ ತಹಶೀಲ್ದಾರ್‌ರವರು ಯಾವ ರೀತಿ ನನ್ನ ಪಕ್ಕದ ಸೀಟಿನಲ್ಲಿ ಕುಳಿತುಕೊಳ್ಳುತ್ತಾರೊ ಹಾಗೆ ಅವರು ಅವಿಭಜಿತ ನಮ್ಮ ಧಾರವಾಡ ಜಿಲ್ಲೆಯ ನನ್ನ ಸಹೋದ್ಯೋಗಿ ಶಾಸಕರು. ಈಗ ಧಾರವಾಡ ಜಿಲ್ಲೆಯ ಪಕ್ಕದ ಜಿಲ್ಲೆಯಾದ ಹಾವೇರಿ ಜಿಲ್ಲೆಯ ಹಾನಗಲ್ಲಿನ ಶಾಸಕರಾಗಿದ್ದಾರೆ ಇವರು ಕಳೆದ ಹಲವಾರು ವರ್ಷಗಳಿಂದ ರಾಜಕೀಯ ಹಾಗೂ ಸಾಮಾಜಿಕ ರಂಗದಲ್ಲಿ ಕೆಲಸ ಮಾಡಿರತಕ್ಕಂಥ, ಸಾಮಾಜಿಕ ಕಳಕಳಿ ಇರುವ ವ್ಯಕ್ತಿ ಇವರಾಗಿದ್ದಾರೆ. ಈ ಹಿಂದೆ ಎರಡು ಸಾರಿ ಶಾಸಕರಾಗಿ ಈ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ ಇವರು ಈ ಬಾರಿ ಮೂರನೇ ಸಾರಿ ಆಯ್ಕೆಯಾಗಿದ್ದಾರೆ, ಈ ಸದನದ ಸಂಸದೀಯ ನಡವಳಿಕೆಗಳ ಬಗ್ಗೆ ಹೆಚ್ಚಿನ ಅನುಭವ ಅವರಿಗಿದೆ ಎನ್ನುವ ವಿಶ್ವಾಸ ನನಗಿದೆ. ಅವರ ಈ ಒಂದು ಅನುಭವದಿಂದ ಅಧ್ಯಕ್ಷರ ಅನುಪಸ್ಥಿಯಲ್ಲಿ ಈ ಸದನವನ್ನು ಒಳ್ಳೆಯ ಮಾದರಿಯ ಸಂಸದೀಯ ಚರ್ಚೆಯ ಒಂದು ಕೇಂದ್ರವನ್ನಾಗಿ ಮಾಡುತ್ತಾರೆ, ಎಲ್ಲಾ ಸದಸ್ಯರ ವಿಶ್ವಾಸವನ್ನು ಪಡೆದುಕೊಳ್ಳುತ್ತಾರೆನ್ನುವ ವಿಶ್ವಾಸವನ್ನು ವ್ಯಕ್ತಪಡಿಸುತ್ತೇನೆ. ವಿರೋಧಪಕ್ಷದಲ್ಲಿರುವ ನಾವೆಲ್ಲರು ಸನ್ಮಾನ್ಯ ಉಪಾಧ್ಯಕ್ಷರಿಗೆ (ಈ ಸಂದರ್ಭದಲ್ಲಿ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು) ಎಲ್ಲಾ ರೀತಿಯ ಸಹಕಾರವನ್ನು ಕೊಡುತ್ತೇವೆನ್ನುವ ಮಾತನ್ನು ಹೇಳುತ್ತೇವೆ. ಹಾಗೆ ಸನ್ಮಾನ್ಯ ಮನೋಹರ್ ತಹಶೀಲ್ದಾರ್‌ರವರಿಗೆ ಮತ್ತೊಮ್ಮೆ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ ಕ್ಷೇತ್ರ) : ಮಾನ್ಯ ಉಪಾಧ್ಯಕ್ಷರೆ, ತಮ್ಮನ್ನು ಸರ್ವಾನುಮತದಿಂದ ಇಲ್ಲಿ ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ, ತಾವು ಈ ಸ್ಥಾನದಲ್ಲಿ ಕುಳಿತು ಮಾನ್ಯ ಅಧ್ಯಕ್ಷರು ನಡೆದುಕೊಳ್ಳುವ ರೀತಿಯಲ್ಲಿ ಈ ಸದನದ ಎಲ್ಲಾ ಪಕ್ಷದ ಸದಸ್ಯರಿಗೂ ಕೂಡ ಚರ್ಚೆ ಮಾಡುವುದಕ್ಕೆ ಸಮಯ ಮಾಡಿಕೊಡುವುದರ ಜೊತೆಗೆ ಈ ಸದನದ ಗೌರವವನ್ನು ಎತ್ತಿ

ಹಿಡಿಯುವುದರಲ್ಲಿ ಹಿಂದೆ ಬೀಳುವುದಿಲ್ಲವೆನ್ನುವ ವಿಶ್ವಾಸ ನಮ್ಮೆಲ್ಲರದ್ದಾಗಿದೆ. ಮೂರನೇ ಬಾರಿ ಶಾಸಕರಾಗಿ ಆಯ್ಕೆಯಾಗಿರುವ ತಮ್ಮ ಬಗ್ಗೆ ಆಡಳಿತ ಪಕ್ಷದವರಿಂದ ಇನ್ನೂ ಹೆಚ್ಚಿನ ರೀತಿಯಲ್ಲಿ ನಿರೀಕ್ಷೆ ಮಾಡಿದ್ದೆವು ಆದರೂ ಕೂಡ ತಮ್ಮನ್ನು ಗುರುತಿಸಿ ಈ ಉಪಾಧ್ಯಕ್ಷರ ಸ್ಥಾನಕ್ಕೆ ಆಯ್ಕೆ ಮಾಡಿರುವುದು ನಮ್ಮೆಲ್ಲರಿಗೂ ಸಂತೋಷ. ಹಿಂದುಳಿದ ವರ್ಗದವರ ಪರವಾಗಿ ಹೋರಾಟ ಮಾಡಿರುವ ತಮಗೆ ಗ್ರಾಮೀಣ ಕಷ್ಟಸುಖಗಳನ್ನು ತಿಳಿದುಕೊಂಡಿರುವ ತಮಗೆ, ಮತ್ತೆ ವಿಶೇಷವಾಗಿ ಉತ್ತರ ಕರ್ನಾಟಕಕ್ಕೆ ರಾಜಕೀಯ ಸ್ಥಾನಮಾನಗಳನ್ನು ಸಿಗುವುದು ಕಡಿಮೆ ಎನ್ನುವ ಒಂದು ಕೂಗಿರುವ ಸಂದರ್ಭದಲ್ಲಿ ನಿಮ್ಮನ್ನು ಉಪಾಧ್ಯಕ್ಷರಾಗಿ ಆಯ್ಕೆ ಮಾಡಿರುವುದು ಬಹಳ ಸಂತೋಷದ ವಿಚಾರ. ತಾವು ಸದನದ ಕಾರ್ಯಕಲಾಪಗಳನ್ನು ನಡೆಸುವ ವಿಚಾರದಲ್ಲಿ ನಾವು ಎಲ್ಲಾ ಸಂದರ್ಭಗಳಲ್ಲೂ ಸಹಕಾರ ಕೊಡುತ್ತೇವೆನ್ನುವ ಮಾತನ್ನು ಹೇಳುತ್ತೇವೆ. ನಾನು ಮೊದಲೇ ಹೇಳಿದಂತೆ, ನಮ್ಮಗಳ ಸಂಖ್ಯೆಯ ಅರಿವು ನಮಗಿದೆ. ನಿಮ್ಮನ್ನು ಸರ್ವಾನುಮತದಿಂದ ಆಯ್ಕೆ ಮಾಡುವ ವಿಚಾರದಲ್ಲಿ ವಿರೋಧ ಪಕ್ಷದಿಂದ ಅರ್ಜಿ ಸಲ್ಲಿಸಿರುವುದು ವೈಯಕ್ತಿಕವಾಗಿ ತಮ್ಮ ಆಯ್ಕೆಯನ್ನು ವಿರೋಧ ಮಾಡುವುದಕ್ಕಲ್ಲವೆಂದು ತಾವು ಅರಿತುಕೊಂಡಿದ್ದೀರೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಸಭಾನಾಯಕರು ಮಾತನಾಡುವಾಗ ಆ ಸ್ಥಾನಕ್ಕೆ ಹೋದವರು, ಯಾವ ಪಕ್ಷದಿಂದ ಆಯ್ಕೆಯಾಗಿರುತ್ತಾರೆ ಆ ಸ್ಥಾನಕ್ಕೆ ರಾಜೀನಾಮೆ ಕೊಡುವುದರ ಮೂಲಕ ಸತ್ಸಂಪ್ರದಾಯವನ್ನು ಹಾಕಿದ್ದಾರೆನ್ನುವ ಮಾತನ್ನು ಹೇಳಿದ್ದಾರೆನ್ನುವ ಮಾತನ್ನು ಹೇಳಿದ್ದಾರೆ ಆಸ್ಥಾನಕ್ಕೆ ಹೋದವರೆಲ್ಲರೂ ಆ ಕೆಲಸವನ್ನು ಮಾಡುವುದರ ಜೊತೆಗೆ ಮತ್ತೆ ಅವರಿಗೆ ಬೇಕಾದ ಪಕ್ಷಕ್ಕೆ ಸೇರುತ್ತಾರೆನ್ನುವುದು ನಮ್ಮೆಲ್ಲರಿಗೂ ತಿಳಿದಿದೆ. ಆದರೆ ಅಲ್ಲಿ ಕುಳಿತಿರುವಾಗ ಯಾವರೀತಿ ಸದನದ ನಿಯಮಾವಳಿಗಳ ಪ್ರಕಾರ ಸದನವನ್ನು ನಡೆಸುತ್ತೇರೆನ್ನುವುದು ಮುಖ್ಯ. ಈ ದೃಷ್ಟಿಯಲ್ಲಿ ಈ ಸದನದಲ್ಲಿ ನಾವು ಬಹಳ ದೊಡ್ಡ ನಿರೀಕ್ಷೆಯನ್ನು ಮಾಡಿದ್ದೇವೆನ್ನುವ ದೃಷ್ಟಿಯಿಂದ ಹೇಳಿದ್ದೇವೆ ವಿನಹ ನಮಗೆ ಅಪಾರವಾದ ದೊಡ್ಡ ಅನುಭವ ನಮಗಿದೆ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳಿರುವುದಲ್ಲ. ಇವತ್ತು ನಾವು ಯಾವ ವೈಯಕ್ತಿಕವಾದ ವಿಚಾರಗಳನ್ನು ಇಲ್ಲಿ ಪ್ರತಿಪಾದನೆ ಮಾಡುವುದಕ್ಕೆ ಬರುವುದಿಲ್ಲ. ರಾಜ್ಯದ ಜನರ ಕಷ್ಟ ಸುಖ, ದುಮ್ಮಾನಗಳನ್ನು ಇಲ್ಲಿ ಪ್ರತಿಬಿಂಬಿಸುವುದಕ್ಕೆ ನಾವು ಬರುತ್ತೇವೆಯೆ ವಿನಹ ಬೇರೆ ಇನ್ಯಾವುದೇ ವಿಚಾರಗಳನ್ನು ಪ್ರತಿಪಾದನೆ ಮಾಡುವುದಕ್ಕೆ ಇಲ್ಲಿ ಬರುವುದಿಲ್ಲವೆನ್ನುವ ಅರಿವು ಕೂಡ ನಮಗಿದೆ. ಇದರ ಹಿನ್ನೆಲೆಯಲ್ಲಿ ಉಪಾಧ್ಯಕ್ಷರಾಗಿರುವವರು ಸಂಬಂಧಿಸಿದ ಪಕ್ಷದ ಸದಸ್ಯರಾಗಿರುತ್ತಾರೆನ್ನುವುದು ನಮಗೆ ಗೊತ್ತಿದೆ. ಆದರೂ ಕೂಡ ನಮ್ಮ ಸಂಸದೀಯ ವ್ಯವಹಾರಗಳಲ್ಲಿ ತಮಗೆ ವಿರೋಧ ಪಕ್ಷದ ನಾಯಕರ ಪಕ್ಷದಲ್ಲಿ ಸ್ಥಾನವನ್ನು ಕೊಟ್ಟಿದ್ದಾರೆ ಏಕೆ? ನೀವು ವಿರೋಧಪಕ್ಷದವರ ಪಕ್ಷಪಾತಿಗಳಾಗಿರಬೇಕು ಎನ್ನುವ ದೃಷ್ಟಿಯಿಂದ ಈ ಸ್ಥಾನವನ್ನು ಕೊಟ್ಟಿದ್ದಾರೆ. ಇಲ್ಲದಿದ್ದರೆ ಈ ಸ್ಥಾನವನ್ನು ಮುಖ್ಯಮಂತ್ರಿಗಳ ಪಕ್ಕದಲ್ಲೋ ಬೇರೆಲ್ಲೋ ಕೊಡಬಹುದಾಗಿತ್ತು. ಈ ಸ್ಥಾನವನ್ನು ಏತಕ್ಕೆ ವಿರೋಧಪಕ್ಷದವರ ನಾಯಕರ ಪಕ್ಕದಲ್ಲಿ ಕೊಟ್ಟಿದ್ದಾರೆ? ತಾವು ಆಡಳಿತ ಪಕ್ಷದಲ್ಲಿದ್ದುಕೊಂಡು ಕೂಡ ವಿರೋಧಪಕ್ಷದವರು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುವ ಸಂದರ್ಭಗಳಲ್ಲಿ ಇವರಿಗೆ ಹೆಚ್ಚಿನ ಸಮಯವನ್ನು ಇವರ ಪಕ್ಷಪಾತಿಗಳಾಗಿ ಕೊಟ್ಟು ತಾವು ಕಾರ್ಯವನ್ನು ನಿರ್ವಹಿಸಬೇಕು ಎನ್ನುವ ಒಂದು ಎಚ್ಚರಿಕೆಯ ಘಂಟೆಯನ್ನು ತೋರಿಸುವ ಸಲುವಾಗಿ ಇದನ್ನು ಮಾಡಿದ್ದಾರೆಂದು ನಾನಾದರು ಭಾವಿಸುತ್ತೇನೆ. ತಮಗೆ ಈ ಸ್ಥಾನದಲ್ಲಿ ಎಲ್ಲಾ

ರೀತಿಯ ಯಶಸ್ಸು ಸಿಗಲೆಂದು ಹಾರೈಸಿ ತಮ್ಮನ್ನು ಗುರುತಿಸಿದ್ದಕ್ಕೆ ಸಭಾನಾಯಕರನ್ನು, ಆಡಳಿತಪಕ್ಷದವರನ್ನು ನಾನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ (ಮುಂಡರಗಿ ಕ್ಷೇತ್ರ) : ಮಾನ್ಯ ಉಪಾಧ್ಯಕ್ಷರೆ, ಈ ದಿವಸ ತಾವು ಇಲ್ಲಿ ಸದನದ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಕ್ಕೆ ಮೊದಲನೆಯದಾಗಿ ತಮ್ಮನ್ನು ನಾನು ಅಭಿನಂದಿಸುತ್ತಿದ್ದೇನೆ. ನಮಗೆ ಒಂದು ಸಂತೋಷವೇನೆಂದರೆ ಈ ಉಪಾಧ್ಯಕ್ಷರ ಸ್ಥಾನ ಹಿಂದೆ ಧಾರವಾಡ ಜಿಲ್ಲೆಯವರಿಗಿತ್ತು, ಸನ್ಮಿತ್ರರಾದ ಯಾವಗಲ್‌ರವರು ಆ ಕೆಲಸವನ್ನು ನಿರ್ವಹಿಸಿದ್ದರು. ಇವತ್ತಿನ ದಿವಸ ಅದು ಪುನ: ನಮ್ಮ ಜಿಲ್ಲೆಗೆ ಸಿಕ್ಕಿರುವುದು ನಮಗೆ ಬಹಳ ಸಂತೋಷ ಹಾಗೂ ಹೆಮ್ಮೆಪಡತಕ್ಕಂಥ ವಿಚಾರ. ಇವತ್ತು ಒಬ್ಬ ಅನುಭವಿಗಳಾಗಿ, ಬಹಳ ಚಿಕ್ಕ ವಯಸ್ಸಿನಲ್ಲಿ ಈ ಸದನಕ್ಕೆ ಬಂದು ಕೆಲಸ ಮಾಡಿದ ಅನುಭವ ತಮಗಿದೆ. ತಾವು ಕೂಡ ಹಿಂದಿನ ಸಂಪ್ರದಾಯದಂತೆ ಈ ಸದನವನ್ನು ಬಹಳ ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿರೆನ್ನುವ ವಿಶ್ವಾಸ ನಮಗಿದೆ ಮತ್ತು ನಮ್ಮ ಭಾಗಕ್ಕೆ ಒಂದು ಕೀರ್ತಿಯನ್ನು ತರುತ್ತೀರಿ ಎನ್ನುವ ವಿಶ್ವಾಸವನ್ನಿಟ್ಟುಕೊಂಡು ಈ ದಿವಸ ತಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಿದಂತಹ ಎಲ್ಲಾ ಸದಸ್ಯರಿಗೂ ಕೂಡ ವೈಯಕ್ತಿಕವಾಗಿ ಹಾಗೂ ಪಕ್ಷದ ಪರವಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಉಪಾಧ್ಯಕ್ಷರೆ, ತಮ್ಮನ್ನು ಈ ಸದನದಲ್ಲಿ ತಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಿದ್ದಕ್ಕೆ ನಾನು ಹತ್ಪೂರ್ವಕವಾದ ಅಭಿನಂದನೆಗಳನ್ನು ತಮಗೆ ಸಲ್ಲಿಸುವುದಕ್ಕೆ ಬಯಸುತ್ತಿದ್ದೇನೆ. ಈಗಾಗಲೇ ಅನೇಕ ಸದಸ್ಯರು ಈ ಸದನವನ್ನು ಕುರಿತು ಮಾತನಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದೇ ಒಂದು ಪ್ರಾರ್ಥನೆಯನ್ನು ತಮ್ಮಲ್ಲಿ ಮಾಡುವುದಕ್ಕೆ ಬಯಸುವುದೇನೆಂದರೆ, ಅಧ್ಯಕ್ಷರು ಬಹಳ ಹಿರಿಯರಿದ್ದಾರೆ, ಬಹಳ ಅನುಭವಿಗಳಿದ್ದಾರೆ, ಅವರು ಈ ಸದನವನ್ನು ಚೆನ್ನಾಗಿ ನಡೆಸಿಕೊಂಡು ಹೋಗುತ್ತಾರೆನ್ನುವ ಪೂರ್ಣ ವಿಶ್ವಾಸವಿದೆ. ಅಧ್ಯಕ್ಷರ ಅನುಪಸ್ಥಿತಿಯಲ್ಲಿ ತಾವು ಅಷ್ಟೇ ಜವಾಬ್ದಾರಿಯುತವಾಗಿ ನಡೆಸಿಕೊಂಡು ಹೋಗಬಹುದೆನ್ನುವ ವಿಶ್ವಾಸವಿದೆ. ತಾವು ಇಂಜಿನಿಯರಿಂಗ್ ಪದವಿ ಪಡೆದವರು, ಕೃಷಿ ಕುಟುಂಬವರ್ಗದಿಂದ ಬಂದವರು ಹಳ್ಳಿಯ ಸಾಮಾನ್ಯ ಜನರ ಕಷ್ಟಗಳನ್ನು ನೇರವಾಗಿ ಅರಿತಂತಹವರು. ಅದಲ್ಲದೆ ಆ ಹಾನಗಲ್ ಕ್ಷೇತ್ರದಲ್ಲಿ ರಾಜಕಾರಣ ಮಾಡಿರುವ ರಾಜಕಾರಣಿಗಳಾಗಿರುವ ಅನುಭವ ತಮಗಿದೆ ಎನ್ನುವ ವಿಚಾರವು ನನಗೆ ಗೊತ್ತಿದೆ. ರಾಜಕೀಯ ಅನುಭವ ಹಾಗೂ ಈ ಎಲ್ಲಾ ಹಿನ್ನೆಲೆಯು ತಮಗಿರುವುದರಿಂದ ಸದನದಲ್ಲಿ ಪ್ರಸ್ತಾವಿಸುವ ಒಂದೊಂದು ವಿಚಾರವು ಎಷ್ಟು ಗಮನಾರ್ಹವಾದುದು, ಜವಾಬ್ದಾರಿಯುತವಾದುದು ಅದು, ನಮ್ಮ ನಮ್ಮ ಕ್ಷೇತ್ರದ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಇದು ಒಂದು ಮಹತ್ತರವಾದ ವೇದಿಕೆ ಹೇಗಾಗಬೇಕು ಎನ್ನುವ ಅನುಭವ ಮತ್ತು ಈ ಎಲ್ಲ ಹಿನ್ನೆಲೆಯೂ ತಮಗೆ ಇರುವುದರಿಂದ ಮತ್ತು ಈ ಸದನದಲ್ಲಿ ಪ್ರಸ್ತಾಪಿಸುವಂಥ ಒಂದೊಂದು ವಿಷಯವೂ ಎಷ್ಟೆಷ್ಟು ಮಹತ್ವದ್ದುನ್ನುವಂಥಾದ್ದರ ಅರಿವು ತಮಗಿರುವುದರಿಂದ, ಎಲ್ಲಾ ಸದಸ್ಯರುಗಳಿಗೆ ಅದರಲ್ಲೂ ವಿಶೇಷವಾಗಿ ಮೊದಲ ಬಾರಿಗೆ ಆಯ್ಕೆಯಾದಂಥ ಸದಸ್ಯರಿಗೆ ಮತ್ತು ಎರಡನೇ ಬಾರಿಗೆ ಆಯ್ಕೆಯಾದಂಥ ನಮ್ಮಂಥ ಸದಸ್ಯರುಗಳಿಗೆ ತಾವು ಹೆಚ್ಚಿನ ಅವಕಾಶವನ್ನು ಕಲ್ಪಿಸಿ ಕೊಟ್ಟು, ಅವರು ಪ್ರಸ್ತಾಪಿಸುವಂಥ ವಿಷಯಕ್ಕೆ ಸರ್ಕಾರದಿಂದ ಸಮರ್ಪಕವಾದ ಉತ್ತರ ಬರುವಂತಾಗಿ ಆ ಸಮಸ್ಯೆ ನಿವಾರಣೆಯಾಗಿ

ಅಭಿವೃದ್ಧಿಯಲ್ಲಿ ನಾವು ಇನ್ನಷ್ಟು ಮುನ್ನಡೆಯುವುದಕ್ಕೆ ಬೇಕಾಗಿರುವಂಥ ಎಲ್ಲ ಮಾರ್ಗದರ್ಶನವನ್ನು ಸಹ ನೀವು ಆ ಸ್ಥಾನದಿಂದ ನಮ್ಮೆಲ್ಲರಿಗೂ ನೀಡುತ್ತೀರಿ ಎನ್ನುವ ವಿಶ್ವಾಸವನ್ನು ವ್ಯಕ್ತಪಡಿಸುತ್ತಾ ಮತ್ತೊಮ್ಮೆ ತಮಗೆ ಅಭಿನಂದಿಸಿ, ನನಗೆ ಅವಕಾಶ ಕೊಟ್ಟಿದ್ದಾಕ್ಕಾಗಿ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಈ ದಿವಸ ಶಾಸನಸಭೆಯ ಎಲ್ಲಾ ಸದಸ್ಯರು ಒಂದೇ ಮನಸ್ಸಿನಿಂದ ತಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಿ ಈ ಸದನಕ್ಕೆ ಮತ್ತು ನಮಗೆ ನಾವು ಗೌರವ ತಂದುಕೊಂಡಿದ್ದೇವೆ. ಇದಕ್ಕಾಗಿ ತಮಗಿಂತ ಮೊದಲು ನಾನು ಪ್ರತಿಪಕ್ಷದ ನಾಯಕರನ್ನು, ಮುಖಂಡರನ್ನು, ಎಲ್ಲಾ ಸದಸ್ಯರನ್ನು ವಿಶೇಷವಾಗಿ ಶ್ರೀಮಾನ್ ಹೆಗಡೆಯವರನ್ನು ಅಭಿನಂದಿಸುತ್ತೇನೆ. ಬಾಕಿಯದೆಲ್ಲಾ ಸತ್ಸಂಪ್ರದಾಯ ಎನ್ನುವುದಕ್ಕಿಂತಲೂ ಇದು ಒಂದು ದೊಡ್ಡ ಸತ್ಸಂಪ್ರದಾಯವಾಗಿದೆ. ಈ ಸಂಪ್ರದಾಯಕ್ಕೆ ತಾವು ನಾಂದಿ ಹಾಕಿದ್ದೀರಿ. ಅದನ್ನು ನಾವು ಸದಾ ನೆನಪಿನಲ್ಲಿ ಇಟ್ಟುಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ. ತಮ್ಮ ಕಾಲಾವಧಿಯಲ್ಲಿ ಈ ಶಾಸನಸಭೆ ಇನ್ನೂ ಹೆಚ್ಚು ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ, ಜನಪರವಾದಂಥ ಕೆಲಸಗಳನ್ನು ಮಾಡುವುದಕ್ಕೆ ಮತ್ತು ಶಾಸನಸಭೆಯ ಘನತೆ, ಗೌರವವನ್ನು ಹೆಚ್ಚಿಸುವುದಕ್ಕೆ ಸಹಕಾರಿಯಾಗಲೀ ಎಂದು ಹೇಳಿ, ನನ್ನ ಶುಭಕಾಮನೆಗಳನ್ನು ಈ ಮೂಲಕ ಹೇಳುತ್ತೇನೆ.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ (ಹಾವೇರಿ) : ಸನ್ಮಾನ್ಯ ಉಪಾಧ್ಯಕ್ಷರೇ, ನಮ್ಮ ಜಿಲ್ಲೆಯವರಾದಂಥ ಹಾನಗಲ್ ತಾಲ್ಲೂಕಿನಿಂದ ಆರಿಸಿ ಬಂದಂಥ ಶ್ರೀಯುತ ಮನೋಹರ್ ಹೆಚ್. ತಹಶೀಲ್ದಾರ್‌ರವರನ್ನು ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆ ಮಾಡಿದ್ದಕ್ಕಾಗಿ ನಮ್ಮ ಹಾವೇರಿ ಜಿಲ್ಲೆಯ ಜನತೆಯ ಪರವಾಗಿ ಮತ್ತು ನನ್ನ ಪರವಾಗಿ ಅವರಿಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮನೋಹರ್ ತಹಶೀಲ್ದಾರ್‌ರವರು ಈಗ ಮೂರನೇ ಬಾರಿ ಶಾಸಕರಾಗಿ ಆರಿಸಿ ಬಂದಿದ್ದು, ಅವರು ಒಳ್ಳೆಯ ಆಡಳಿತಗಾರರು, ಒಳ್ಳೆಯ ಕೆಲಸಗಾರರು, ಅವರ ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಬಂದು ಒಳ್ಳೆಯ ಹೆಸರನ್ನು ತೆಗೆದುಕೊಂಡಿರತಕ್ಕಂಥವರು, ಒಳ್ಳೆಯ ಸಂಪನ್ನರು. ಆಡಳಿತ ಪಕ್ಷದವರು ಅಂಥವರನ್ನು ಗುರುತಿಸಿ ಉಪಾಧ್ಯಕ್ಷರ ಸ್ಥಾನವನ್ನು ಕೊಟ್ಟಿದ್ದಕ್ಕಾಗಿ ಮತ್ತೊಮ್ಮೆ ಅವರಿಗೆ ವಂದಿಸುತ್ತೇನೆ. ನಾನು ಉಪಾಧ್ಯಕ್ಷರಲ್ಲಿ ಕೇಳಿಕೊಳ್ಳುವುದು ಇಷ್ಟೇ, ಹೊಸದಾಗಿ ಆರಿಸಿ ಬಂದಂಥ ಮತ್ತು ನಮ್ಮಂತೆ ಎರಡನೇ ಬಾರಿಗೆ ಆರಿಸಿ ಬಂದಂಥ ಹಿಂದಿನ ಸಾಲಿನಲ್ಲಿ ಕುಳಿತಿರುವಂಥವರನ್ನು ಕಡೆಗಣಿಸದೇ, ಎಲ್ಲ ಚರ್ಚೆಗಳಲ್ಲಿ ನಮಗೆ ಹೆಚ್ಚಿನ ಅವಕಾಶವನ್ನು ಕೊಡುವುದರ ಮೂಲಕ, ಅಧ್ಯಕ್ಷರು ಯಾವ ರೀತಿಯಾಗಿ ನಡೆದುಕೊಳ್ಳುತ್ತಾರೋ, ತಾವು ಕೂಡ ಅದೇ ರೀತಿ ನಮಗೆ ಅವಕಾಶವನ್ನು ಕಲ್ಪಿಸಿಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳಿ, ತಾವು ಈ ಉಪಾಧ್ಯಕ್ಷರ ಸ್ಥಾನವನ್ನು ಯಶಸ್ವಿಯಾಗಿ, ಸಮರ್ಪಕವಾಗಿ ನಡೆಸಿಕೊಂಡು ಬರಲು ತಮಗೆ ದೇವರು ಒಳ್ಳೆಯ ಶಕ್ತಿಯನ್ನು, ಒಳ್ಳೆಯ ಆರೋಗ್ಯವನ್ನು ನೀಡಲಿ ಎಂದು ಹೇಳಿ ಈ ಸಂದರ್ಭದಲ್ಲಿ ತಮಗೆ ಅಭಿನಂದನೆ ಸಲ್ಲಿಸಲು ನನಗೆ ಅವಕಾಶ ಮಾಡಿ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರ್) : ಸನ್ಮಾನ್ಯ ಉಪಾಧ್ಯಕ್ಷರೇ, ಈ ಸದನವು ತಮ್ಮನ್ನು ಸರ್ವಾನುಮತದಿಂದ ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಾಕ್ಕಾಗಿ ನಾನು ಇಡೀ ಸದನಕ್ಕೆ, ಅದರಲ್ಲೂ ಮುಖ್ಯವಾಗಿ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ತಮ್ಮ ಸಾಮರ್ಥ್ಯವನ್ನು ಚೆನ್ನಾಗಿ ಅರಿತುಕೊಂಡಂಥ ಸದನ ತಮಗೆ ಉಪಾಧ್ಯಕ್ಷರ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದು, ಕರ್ನಾಟಕ ಜನತೆಗೆ, ಅದರಲ್ಲೂ ಮುಖ್ಯವಾಗಿ ಹಾವೇರಿ ಜಿಲ್ಲೆಯ ಪ್ರತಿಯೊಬ್ಬ ಪ್ರಜೆಗೂ ಅತ್ಯಂತ ಸಂತೋಷವನ್ನು ತಂದಿದೆ ಎಂದರೆ ಅತಿಶಯೋಕ್ತಿಯಾಗಲಾರದು. ತಾವು ಮೂರು ಬಾರಿ ಈ ಸದನದ ಸದಸ್ಯರಾಗಿ, ಹಾವೇರಿ ಜಿಲ್ಲೆಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ, ಅಖಂಡ ಧಾರವಾಡ ಜಿಲ್ಲೆಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ, 17 ವರ್ಷಗಳ ಕಾಲ ತಾವು ಅನುಭವವನ್ನು ಪಡೆದುಕೊಂಡಿದ್ದೀರಿ. ಬಡವರ ಬಗ್ಗೆ ತಮಗೆ ಇರತಕ್ಕಂಥ ಚಿಂತನೆ ನಿಜವಾಗಿಯೂ ತಮ್ಮನ್ನು ಈ ಸ್ಥಾನಕ್ಕೆ ತಂದಿದೆ ಎಂದರೆ ತಪ್ಪಾಗಲಾರದು. ಈ ಒಂದು ಪ್ರಾಮುಖ್ಯವಾದಂಥ ಸ್ಥಾನದಲ್ಲಿ ತಾವು ಕುಳಿತುಕೊಂಡು ಬಡವರ ಬಗೆಗಿನ ಸಮಸ್ಯೆಗಳು ಈ ಸದನದಲ್ಲಿ ಚರ್ಚೆಯಾಗುವಾಗ ಅವುಗಳಿಗೆ ಹೆಚ್ಚು ಒತ್ತು ಕೊಟ್ಟು, ಹೆಚ್ಚು ವೇಳೆಯನ್ನು ಕೊಟ್ಟು, ಈ ರಾಜ್ಯದ ಬಡವರ ಸಮಸ್ಯೆಗಳನ್ನು ಹೆಚ್ಚು ಬೆಂಬಲಿಸುತ್ತೀರಿ ಎನ್ನುವ ಮಾತನ್ನು ಹೇಳುತ್ತೇನೆ. ತಾವು ಅಪ್ಪಟ ಕಾಂಗ್ರೆಸ್ಸಿಗರಾಗಿ ಎಂದು ರಾಜಕೀಯ ಜೀವನವನ್ನು ಪ್ರಾರಂಭ ಮಾಡಿದಿರಿ ಅಂದಿನಿಂದ ಇಂದಿನವರೆಗೂ ಕಾಂಗ್ರೆಸ್ ಪಕ್ಷಕ್ಕೆ ಎಂದೂ ದ್ರೋಹವನ್ನು ಮಾಡಿಲ್ಲ. ಇದು ತಮಗೆ ಬರತಕ್ಕಂಥ ದೊಡ್ಡ ಕೀರ್ತಿ. ತಮಗೆ ಬಡವರ ಬಗ್ಗೆ ಇರತಕ್ಕಂಥ ಹಿತಚಿಂತನೆ, ಅಪ್ಪಟ ಕಾಂಗ್ರೆಸ್ಸಿಗರಾಗಿ ಇರತಕ್ಕಂಥ ತಮ್ಮ ನೀತಿಯೇ ತಮ್ಮನ್ನು ಈ ಸ್ಥಾನಕ್ಕೆ ತಂದು ಕೂರಿಸಿದೆ ಎಂದರೆ ತಪ್ಪಾಗಲಾರದು. ಈ ಸದನದಲ್ಲಿ ನಡೆಯತಕ್ಕಂಥ ಪ್ರತಿಯೊಂದು ಕಾರ್ಯಕ್ರಮಗಳಿಗೂ ತಾವು ಈ ಸದನದ ನಿಯಮಗಳ ಅನುಸಾರವಾಗಿ, ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸದನವನ್ನು ನಡೆಸುತ್ತೀರಿ ಎನ್ನತಕ್ಕಂಥ ಮಾತನ್ನು ಹೇಳುತಾ, ಹಾವೇರಿ ಜಿಲ್ಲೆಯ ಪ್ರತಿಯೊಬ್ಬ ಪ್ರಜೆಯ ಪರವಾಗಿ ಮತ್ತು ರಾಜ್ಯದ ಜನತೆಯ ಪರವಾಗಿ ತಮಗೆ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಶ್ರೀ ಬಿ. ಆರ್. ಯಾವಗಲ್ (ನರಗುಂದ್) :ಮಾನ್ಯ ಉಪಾಧ್ಯಕ್ಷರೇ, ನಾವು ನೂತನವಾಗಿ ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದಂಥ ಈ ಸಂದರ್ಭದಲ್ಲಿ ನಾನು ಹೃತ್ಪೂರ್ವಕವಾಗಿ ತಮ್ಮನ್ನು ಅಭಿನಂದಿಸಬಯಸುತ್ತೇನೆ. ಮಾನ್ಯ ಎಸ್. ಎಸ್. ಪಾಟೀಲರು ಹೇಳಿದ ಹಾಗೆ, ಇದು ಅಖಂಡ ಧಾರವಾಡ ಜಿಲ್ಲೆಗೆ ಎರಡನೇ ಬಾರಿಗೆ ಸಂದ ಗೌರವ ಎಂದು ನಾನು ಭಾವಿಸುತ್ತೇನೆ. ತಾವು ವಹಿಸಿಕೊಂಡಿರುವಂಥ ಜವಾಬ್ದಾರಿಯ ಇತಿಮಿತಿಗಳು ಬಹಳ ಸೀಮಿತವಾದುದು ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಎಷ್ಟರಮಟ್ಟಿಗೆ ಅಧ್ಯಕ್ಷರು ತಮ್ಮನ್ನು ಬಿಡುತ್ತಾರೋ, ತಮಗೆ ಅನುವು ಮಾಡಿಕೊಡುತ್ತಾರೋ, ಅವಕಾಶ ಮಾಡಿಕೊಡುತ್ತಾರೋ ಅಷ್ಟು ಮಾತ್ರ ತಮಗೆ ಅವಕಾಶವಿರುತ್ತದೆ. ತಾವೂ ಸಹ ಇದರ ಬಗ್ಗೆ ಸಾಕಷ್ಟು ಅನುಭವಿಕರು, ಬಹಳಷ್ಟು ಸಾರಿ ಬಂದಿದ್ದೀರಿ. ತಮ್ಮ ಮೂಲಕ, ಈ ಸಭೆಯ ಮೂಲಕ ನಾನು ಮಾನ್ಯ ಅಧ್ಯಕ್ಷರನ್ನು ವಿನಂತಿ ಮಾಡಿಕೊಳ್ಳಬಯಸುತ್ತೇನೆ, ಹೊಸ ಸದಸ್ಯರಿಗೆ, ಉಪಾಧ್ಯಕ್ಷರಿಗೆ ಅನುಭವ ಪಡೆಯುವಂಥ ಅವಕಾಶ ನೀಡುವಂಥ ಔದಾರ್ಯವನ್ನು ಅವರು ತೋರಬೇಕೆಂದು ವಿನಂತಿಸುತ್ತೇನೆ. ಬಹಳಷ್ಟು ಸೃಜನಪೂರಿತವಾದಂಥ ಅಧ್ಯಕ್ಷರು ಅದಕ್ಕೆ ಅವಕಾಶ ಮಾಡಿಕೊಡುತ್ತಾರೆ ಎಂದು ಭಾವಿಸಿದ್ದೇನೆ.

ಈ ಸದನದ ಗೌರವ, ಇದರ ಪ್ರತಿಷ್ಠೆ, ಇದರ ಸದಸ್ಯರ ಹಕ್ಕುಗಳನ್ನು ರಕ್ಷಣೆ ಮಾಡುವಂಥ ಎಲ್ಲ ಸದವಕಾಶ ತಮಗೆ ಇದೆ, ಅದನ್ನು ತಾವು ಮಾಡುತ್ತೀರಿ ಎಂದು ಹಾರೈಸಿ, ತಮಗೆ ಮತ್ತೊಮ್ಮೆ ಅಭಿನಂದನೆಗಳನ್ನು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

ಉಪಾಧ್ಯಕ್ಷರು : ಈಗ ತಾವು ಕೊನೆಯದಾಗಿ ಮಾತನಾಡಿ. ನಂತರ ನಾವು ಮುಂದಿನ ಕಲಾಪಗಳಿಗೆ ಅನುವು ಮಾಡೋಣ.

ಶ್ರೀ ಎ. ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಸನ್ಮಾನ್ಯ ಉಪಾಧ್ಯಕ್ಷರೇ, ಇವತ್ತು ತಾವು ಒಮ್ಮತದಿಂದ ಈ ಸದನದ ಉಪಾಧ್ಯಕ್ಷರಾಗಿ ಚುನಾಯಿತರಾಗಿರತಕ್ಕಂಥಾದ್ದು ನಿಜಕ್ಕೂ ಕೂಡ ನಮಗೆ ತುಂಬಾ ಹೆಮ್ಮೆ. ಹಿಂದೆ ತಾವು ಎರಡು ಸಲ ಈ ಸದನದ ಸದಸ್ಯರಾಗಿ ಕೆಲಸ ಮಾಡಿ ಅನುಭವವನ್ನು ಪಡೆದಿದ್ದೀರಿ. ನಾನು ಉಪಾಧ್ಯಕ್ಷರಲ್ಲಿ ಮನವಿಯನ್ನು ಸಲ್ಲಿಸುತ್ತೇನೆ, ತಮ್ಮ ಅಧಿಕಾರಾವಧಿಯಲ್ಲಿ, ಈ ಸದನದ ಸದಸ್ಯರಾದಂಥವರು ಯಾರೂ ಮಾತನಾಡದೇ ಹೋದರು ಎನ್ನುವಂಥಾದ್ದು ಪತ್ರಿಕೆಗಳಲ್ಲಿ ಬರಬಾರದು. ಈ ಸದನದಲ್ಲಿ ಇರತಕ್ಕಂಥ ಅಂಥ ಸದಸ್ಯರು, ಇಂಥ ಸದಸ್ಯರು ಮಾತನಾಡಲಿಲ್ಲ ಎನ್ನುವುದು ಪತ್ರಿಕೆಯಲ್ಲಿ ಬರಬಾರದು. ಆ ರೀತಿ ಆಗುವಂತೆ ತಾವು ಎಲ್ಲರಿಗೂ ಅವಕಾಶವನ್ನು ಕಲ್ಪಿಸಿಕೊಟ್ಟು, ಅವರವರ ಟ್ಯಾಲೆಂಟ್ ಪ್ರಕಾರ ತಾವು ಅವರಿಗೆ ಒಂದು ಬೆಂಬಲವನ್ನು ಕೊಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ತಾವು ಒಬ್ಬ ಉತ್ತಮ ಅಂಪೈರ್ ಆಗಿ, ಕೋಚ್ ಆಗಿ, ಗೈಡ್ ಆಗಿ, ಜಡ್ಜ್ ಆಗಿ ಕೆಲಸ ಮಾಡುತ್ತೀರಿ ಎಂದು ಈ ಸಂದರ್ಭದಲ್ಲಿ ಹೇಳಿ ನಾನು ಶುಭವನ್ನು ಹಾರೈಸುತ್ತಿದ್ದೇನೆ. ನಾನು ಪ್ರಥಮವಾಗಿ ತಮ್ಮನ್ನು ಭೇಟಿ ಮಾಡಿದಾಗ ತಹಶೀಲ್ದಾರ್ ಎನ್ನತಕ್ಕಂಥ ತಮ್ಮ ಹೆಸರನ್ನು ನೋಡಿ, ತಮ್ಮದು ತಹಶೀಲ್ದಾರ್ ಹುದ್ದೆಯನ್ನು ಅಲಂಕರಿಸಿರುವ ವಂಶವೇನೋ ಎಂದು ನಾನು ಭಾವಿಸಿದ್ದೆ. ಆದರೆ ತಾವು ತಮ್ಮ ವಂಶಸ್ಥರ ಹೆಸರನ್ನು ಮುಂದುವರೆಸಿಕೊಂಡಿದ್ದೀರಿ ಎಂದು ಗೊತ್ತಾಯಿತು. ತಾವು ಮಾತನಾಡಿದಂಥ ಸಂದರ್ಭದಲ್ಲಿ, ತಾವು ತಾಳ್ಮೆಯ ಮೂರ್ತಿಗಳು, ಶಾಂತವಾಗಿರತಕ್ಕಂಥವರು, ತಾವು ಒಂದು ದಿನವೂ ಕೋಪಿಸಿಕೊಂಡಿರುವಂಥಾದ್ದನ್ನು ನಾನು ನೋಡಿಲ್ಲ.

ಈ ಸಭೆಯನ್ನು ಚೆನ್ನಾಗಿ ನಡೆಸಿಕೊಂಡು ಹೋಗುತ್ತೀರಿ ಎನ್ನುವ ನಂಬಿಕೆ ನನಗಿದೆ. ನಮ್ಮೆಲ್ಲರ ಸಹಕಾರ, ಪೂರ್ಣ ಬೆಂಬಲವನ್ನು ತಮಗೆ ಕೊಡುತ್ತೇವೆ. ಇದರ ಜೊತೆಗೆ ತಾವು ಒಂದು ವಿಚಾರವನ್ನು ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನನ್ನ ಒಂದು ಸಣ್ಣ ಮನವಿ. ಅದೇನೆಂದರೆ ನಾವು ಚುನಾವಣೆಯಲ್ಲಿ ಮೊದಲ ಬಾರಿಗೆ ಆರಿಸಿ ಈ ಸದನಕ್ಕೆ ಬಂದಿರುವುದರಿಂದ ನಮಗೆ ಕೊನೆಯ ಸಾಲಿನಲ್ಲಿ ಸ್ಥಳಾವಕಾಶವನ್ನು ಮಾಡಿಕೊಟ್ಟಿದ್ದಾರೆ. ನಾವು ಇಷ್ಟು ಹಿಂದುಗಡೆ ಇರುವುದರಿಂದ ನಾವು ಮುಂದುಗಡೆ ಕುಳಿತಿರುವವರ ಹಾಗೆ ನಿಮ್ಮ ಕಣ್ಣಿಗೆ ನಾವು ಕಾಣುವುದಿಲ್ಲ. ಇದರಿಂದ ನಮ್ಮ ಪರಿಸ್ಥಿತಿ ನಮ್ಮನ್ನು ಯಾರು ಕೇಳುವವರಿರುವುದಿಲ್ಲ ಎನ್ನುವ ಹಾಗೆ ಆಗಿದೆ. ಆದ್ದರಿಂದ ನಮ್ಮ ಬಗ್ಗೆ ಕನಿಕರ ತೋರಿ ಸದನದ ಕಲಾಪಗಳಲ್ಲಿ ಭಾಗವಹಿಸಲು ನಮಗೆ ಹೆಚ್ಚೆಚ್ಚು ಅವಕಾಶಗಳನ್ನು ಕಲ್ಪಿಸಿಕೊಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಾ, ತಮಗೆ ಶುಭವಾಗಲಿ ಎಂದು ಹಾರೈಸುತ್ತೇನೆ. ಧನ್ಯವಾದಗಳು.

ಶ್ರೀ ಮನೋಹರ್ ಹೆಚ್. ತಹಸೀಲ್ದಾರ್ (ಉಪಾಧ್ಯಕ್ಷರು) : ಈ ಸದನದ ಸಭಾ ನಾಯಕರು ಮತ್ತು ಮುಖ್ಯಮಂತ್ರಿಗಳಾದಂಥ ಸನ್ಮಾನ್ಯ ಎಸ್. ಎಂ. ಕೃಷ್ಣರವರೆ, ಮೇಲ್ಮನೆಯ ಸಭಾನಾಯಕರಾದಂಥ ಮಾನ್ಯ ಹೆಚ್. ಕೆ. ಪಾಟೀಲ್‌ರವರೆ, ವಿರೋಧ ಪಕ್ಷದ ನಾಯಕರಾದಂಥ ಶ್ರೀ ಜಗದೀಶ್ ಶೆಟ್ಟರೆ, ಜನತಾದಳ (ಯು) ಪಕ್ಷದ ನಾಯಕರಾದಂಥ ಶ್ರೀ ಪಿ. ಜಿ. ಆರ್. ಸಿಂಧ್ಯಾರವರೆ, ಉಪನಾಯಕರಾದಂಥ ಶ್ರೀ ಉಮೇಶ್ ಕತ್ತಿಯವರೆ, ದಳ(ಎಸ್) ಪಕ್ಷದ ನಾಯಕರಾದಂಥ ಶ್ರೀ ಮಾಲಿಕಯ್ಯ ಗುತ್ತೇದಾರ್‌ರವರೆ, ಉಪನಾಯಕರಾದಂಥ ಶ್ರೀ ಚಿನ್ನಿಗಪ್ಪರವರೆ, ಎಲ್ಲಾ ಸಚೇತಕರುಗಳೇ, ಈ ಸದನದ ಹಿರಿಯ ಮತ್ತು ಇತರೆ ಎಲ್ಲಾ ಸಚಿವರುಗಳೆ, ಮತ್ತು ಈ ಸದನದ ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ಎಲ್ಲಾ ಮಾನ್ಯ ಶಾಸಕರುಗಳೆ, ಈ ದಿವಸ ನನ್ನನ್ನು ತಾವೆಲ್ಲ ಅವಿರೋಧವಾಗಿ ಆಯ್ಕೆ ಮಾಡಿದ್ದಕ್ಕಾಗಿ ನಾನು ಮೊಟ್ಟಮೊದಲನೆಯದಾಗಿ ತಮ್ಮೆಲ್ಲರಿಗೂ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವಿರೋಧವಾಗಿ ಆಯ್ಕೆಯಾಗಲಿಕ್ಕೆ ಸಹಕಾರ ಕೊಟ್ಟಂಥ ಗೌರವಾನ್ವಿತ ಶಾಸಕರಾದಂಥ ಮಾನ್ಯ ವಿಶ್ವೇಶ್ವರ ಹೆಗಡೆಯವರನ್ನು ಕೂಡ ಈ ಸಂದರ್ಭದಲ್ಲಿ ವಿಶೇಷವಾಗಿ ಅಭಿನಂದಿಸುತ್ತೇನೆ. ಮತ್ತು ನನ್ನ ಆಯ್ಕೆ ಆದ ಮೇಲೆ ನನ್ನ ಪರವಾಗಿ, ನನ್ನ ವಿಚಾರವಾಗಿ ನಮ್ಮ ಅನೇಕ ಜನ ಸನ್ಮಿತ್ರರು ಮಾತನಾಡುತ್ತಾ ಒಳ್ಳೆಯ ಅಭಿಪ್ರಾಯ ವ್ಯಕ್ತಪಡಿಸಿದ್ದಕ್ಕಾಗಿ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಾ, ಈ ಒಂದು ಗೌರವಾನ್ವಿತ ಸ್ಥಾನವನ್ನು ನನಗೆ ದೊರಕಿಸಿಕೊಟ್ಟು, ಈ ಸದನದ ಕಾರ್ಯಕಲಾಪಗಳು ಒಳ್ಳೆಯ ರೀತಿಯಲ್ಲಿ ನಡೆಯಲಿಕ್ಕೆ ನನ್ನಿಂದ ಬಹಳಷ್ಟು ನೀರಿಕ್ಷೆಯನ್ನು ತಾವು ಮಾಡುತ್ತಿದ್ದೀರಿ. ಈ ಸಂದರ್ಭದಲ್ಲಿ ತಮಗೆಲ್ಲ ಒಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ ಮತ್ತು ಭರವಸೆಯನ್ನು ಕೊಡುವುದಕ್ಕೆ ಇಚ್ಛಿಪಡುತ್ತೇನೆ. ಈ ಉನ್ನತ ಸ್ಥಾನದ, ಸದನದ ಗೌರವವನ್ನು, ಪರಂಪರೆಯನ್ನು, ಮುಂದುವರೆಸಿಕೊಂಡು ಹೋಗಿ, ಇದಕ್ಕೆ ಯಾವ ರೀತಿಯಲ್ಲೂ ಕುಂದು, ಚ್ಯುತಿ ಬರದ ಹಾಗೆ ಜನತೆಗೆ ಅನುಕೂಲವಾಗುವ ರೀತಿಯಲ್ಲಿ ಈ ಸದನದ ಕಾರ್ಯಕಲಾಪಗಳನ್ನು ನಡೆಸಲಿಕ್ಕೆ ನಾನು ಸದಾ ಪ್ರಯತ್ನ ಮಾಡುತ್ತೇನೆಂದು ಹೇಳುತ್ತಾ, ನಮ್ಮ ಈ ಕಲಾಪಗಳನ್ನು ವ್ಯವಸ್ಥಿತ ರೀತಿಯಲ್ಲಿ, ಕಾನೂನಿನ ಚೌಕಟ್ಟಿನಲ್ಲಿ ನಡೆಸಲಿಕ್ಕೆ ತಮ್ಮೆಲ್ಲರಿಂದ ನಾನು ಸಹಕಾರವನ್ನು ಕೂಡ ಬಯಸುತ್ತೇನೆ. ಈ ಹುದ್ದೆ ಉನ್ನತವಾದ, ಜವಾಬ್ದಾರಿಯುತವಾದದ್ದು ಎನ್ನುವುದು ನನಗೆ ಗೊತ್ತಿದೆ. ಈ ಒಂದು ಸ್ಥಾನಕ್ಕೆ ಹಿರಿಯರನ್ನು ನೇಮಿಸಿ ಅವರ ಮುಖಾಂತರ ಈ ಸದನದ ಕಲಾಪವನ್ನು ನಾವು ನಿರೀಕ್ಷಣೆ ಮಾಡಬಹುದಾಗಿತ್ತು. ನಾನು ಚಿಕ್ಕವಯಸ್ಸಿನವನು ಆದರೂ ಕೂಡ ಈ ದಿನ ನಮ್ಮ ಸಭಾನಾಯಕರು ನನಗೆ ಇಂಥ ಒಂದು ಜವಾಬ್ದಾರಿಯನ್ನು ವಹಿಸಿದ್ದಾರೆ. ಈ ಸ್ಥಾನಕ್ಕೆ ನಾನು ಹೊಸಬನಾಗಿರುವುದು ತಮಗೆಲ್ಲ ಗೊತ್ತಿದೆ. ನಾನು ಈ ಸದನಕ್ಕೆ 3ನೇ ಬಾರಿ ಆಯ್ಕೆಯಾಗಿ ಪ್ರವೇಶ ಮಾಡಿರುವುದಾಗಿದೆ. ನಾನು ಇಲ್ಲಿ ಅನೇಕ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದೇನೆ. ಹಾಗಾಗಿ ವಿಶೇಷತಃ ಎಲ್ಲರ ಪರಿಚಯ ಇರುವುದರಿಂದ, ವಿಚಾರವೂ ಕೂಡ ಗೊತ್ತಿರುವುದರಿಂದ ಖಂಡಿತವಾಗಿಯೂ ಈ ಸದನದ ಪಾವಿತ್ರವನ್ನು, ಪ್ರಾಮುಖ್ಯತೆಯನ್ನು ನಾನು ಉಳಿಸಿಕೊಂಡು ಹೋಗುತ್ತೇನೆ ಎನ್ನುವಂಥ ಭರವಸೆಯನ್ನು ತಮಗೆ ಕೊಡುತ್ತಾ, ಈ ಸದನದಲ್ಲಿ ಎಲ್ಲಾ ಸದಸ್ಯರು ತಮ್ಮ ತಮ್ಮ ಬೇಡಿಕೆಗಳನ್ನು ಮಂಡಿಸುವುದು ಸಹಜ. ಇವತ್ತು ನಾವೆಲ್ಲಾ ಜನರಿಂದ ಬೆಂಬಲ ಪಡೆದು ಜನರಿಗಾಗಿ ಕೆಲಸ ಮಾಡುವುದಕ್ಕೋಸ್ಕರ ಈ ಸದನವನ್ನು ಪ್ರವೇಶ ಮಾಡಿದ್ದೇವೆ. ಸಾಮಾನ್ಯವಾಗಿ ಎಲ್ಲರ ಸಮಸ್ಯೆಗಳೂ ಒಂದೇ ಆಗಿರುತ್ತವೆ. ಇದರಲ್ಲಿ ವಿಶೇಷತಃ ವಿರೋಧ ಪಕ್ಷದವರು ಆಡಳಿತ ಪಕ್ಷದವರ ಮೇಲೆ

ಬೆಳಕು ಚೆಲ್ಲುವಂಥ ಹಲವಾರು ಸಮಸ್ಯೆಗಳನ್ನು ಪ್ರಸ್ತಾಪ ಮಾಡುವುದು ಸಹಜ. ಯಾವುದೇ ವಿಚಾರ ಇರಲಿ, ತಾವೆಲ್ಲ ಬಹಳಷ್ಟು ಅನುಭವಸ್ಥರು ಇರುವುದರಿಂದ ಆವೇಶಕ್ಕೆ ಒಳಗಾಗದೆ, ಭಾವೋದ್ರೇಕವನ್ನು ವ್ಯಕ್ತಪಡಿಸದೆ ಕಾನೂನಿನ ಚೌಕಟ್ಟಿನಲ್ಲಿ ಸಲೀಸಾಗಿ ಈ ಸದನದಿಂದ ತಾವು ಉತ್ತರವನ್ನು ಪಡೆಯಬಹುದು. ಸರ್ಕಾರದ ಪರವಾಗಿ ನಮ್ಮ ಸಚಿವರು ಉತ್ತರವನ್ನು ಕೊಡುವುದಕ್ಕೆ ತಾವೆಲ್ಲ ಸಹಕರಿಸಬೇಕು ಹಾಗೆಯೇ ಮಾನ್ಯ ಸದಸ್ಯರುಗಳು ಕೇಳಿದ ಪ್ರಶ್ನೆಗಳ ಬಗ್ಗೆ, ಪ್ರಸ್ತಾಪ ಮಾಡಿದಂಥ ಅನೇಕ ವಿಷಯಗಳ ಬಗ್ಗೆ ನಮ್ಮ ಮಂತ್ರಿಗಳು ಕೂಡ ಅಷ್ಟೇ ಜವಾಬ್ದಾರಿಯಿಂದ ಉತ್ತರವನ್ನು ಕೊಡುವುದಕ್ಕೆ ಮುಂದಾಗಬೇಕು ಮತ್ತು ಮುಂದಾಗುತ್ತಾರೆ. ರಾಜ್ಯದ ಜನತೆಯ ಕಷ್ಟಕಾರ್ಪಣ್ಯಗಳನ್ನು, ರಾಜ್ಯದಲ್ಲಿ ನಡೆಯುತ್ತಿರುವಂಥ ಹಲವಾರು ಸಮಸ್ಯೆಗಳನ್ನು ಚರ್ಚಿಸುವುದಕ್ಕೆ ಈ ಸದನ ಅತ್ಯುತ್ತಮವಾದ ಸ್ಥಳವಾಗಿದೆ. ಈ ಸದನದ ಸಮಯವನ್ನು ವೃಥಾ ವ್ಯರ್ಥಮಾಡದೆ, ಸಾರ್ವಜನಿಕರ ಹಣವನ್ನು ಕೂಡ ಇಲ್ಲಿ ಅನಾವಶ್ಯಕವಾಗಿ ವ್ಯಯ ಮಾಡದೆ, ನಾವು ಸಮಯೋಜಿತವಾಗಿ ವರ್ತಿಸಿ ಉಭಯ ಪಕ್ಷದವರು ಕೂಡ ಇಲ್ಲಿ ತಮ್ಮ ತಮ್ಮ ಅನಿಸಿಕೆಗಳನ್ನು ವ್ಯವಸ್ಥಿತವಾಗಿ ಕಾನೂನಿನ ಚೌಕಟ್ಟಿನಲ್ಲಿ, ಸದನದ ವ್ಯಾಪ್ತಿಯಲ್ಲಿ ಬರುವಂಥ ವಿಷಯವನ್ನು ಮಂಡಿಸಿ ಉತ್ತರ ಪಡೆಯಬಹುದು. ಯಾರೂ ಕೂಡ ಯಾವುದೇ ಆವೇಶಕ್ಕೆ ಒಳಗಾಗಬಾರದು, ನೀವೆಲ್ಲಾ ಬಹಳಷ್ಟು ಅನುಭವಸ್ಥರಿರುವುದರಿಂದ ನಿಮಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಇಚ್ಛಿಪಡುವುದಿಲ್ಲ. ಒಟ್ಟಿನಲ್ಲಿ ಈ ಸದನದ ಘನತೆ, ಗೌರವ, ಪರಂಪರೆಯನ್ನು ನಾವು ಮುಂದುವರೆಸಿಕೊಂಡು ಹೋಗುವಲ್ಲಿ ಯಾವುದೇ ರೀತಿಯ ಚ್ಯುತಿ ಆಗದಂತೆ, ಸದಸ್ಯರ ಹಕ್ಕು ನಷ್ಟ ಆಗದ ರೀತಿಯಲ್ಲಿ, ಸರ್ಕಾರವನ್ನು ವೃಥಾ ಪೇಚಿಗೆ ಸಿಕ್ಕಿಸುವಂಥ ರೀತಿಯಲ್ಲಿ ಸದಸ್ಯರು ಮುಂದಾಗಬಾರದು. ಆದರೆ ವಿರೋಧ ಪಕ್ಷದ ಸದಸ್ಯರು ಕೇಳುವಂಥ ಪ್ರಶ್ನೆಗಳಿಗೆ ಅಥವಾ ಅವರು ಪ್ರಸ್ತಾಪ ಮಾಡುವಂಥ ಅನೇಕ ವಿಚಾರಗಳಿಗೆ ಸರಿಯಾದ ಸಮಯದಲ್ಲಿ ಉತ್ತರವನ್ನು ಒದಗಿಸಿದರೆ ಅದಕ್ಕೆ ಒಳ್ಳೆಯ ಮೆರಗು ಬರುತ್ತದೆ.

11.00 ಎ ಎಂ

ತಮ್ಮೆಲ್ಲರ ಸಹಕಾರದಿಂದ ನಾನು ಖಂಡಿತವಾಗಿಯೂ ಈ ಒಂದು ಸದನದಲ್ಲಿ ಒಳ್ಳೆಯ ರೀತಿಯಲ್ಲಿ ಕಾರ್ಯಕಲಾಪಗಳನ್ನು ನಡೆಸಲಿಕ್ಕೆ ಆಗುತ್ತದೆ, ತಮ್ಮೆಲ್ಲರ ಸಹಕಾರ, ಬೆಂಬಲಬೇಕು ಎಂದು ಕೇಳಿಕೊಂಡು ಎಲ್ಲರಿಗೂ ವಂದಿಸಿ, ನನ್ನನ್ನು ಈ ಸ್ಥಾನಕ್ಕೆ ತರಲು ಎಲ್ಲರೂ ಇವತ್ತು ಒಮ್ಮತದಿಂದ ನಿರ್ಣಯಕ್ಕೆ ಬಂದಿದ್ದಕ್ಕಾಗಿ ಮತ್ತೊಮ್ಮೆ ವಂದಿಸಿ, ಮುಂದಿನ ಕಾರ್ಯಕ್ರಮಗಳನ್ನು ಪ್ರಾರಂಭ ಮಾಡೋಣವೆಂದು ತಿಳಿಸಲಿಚ್ಛಿಸುತ್ತೇನೆ.

4. ನಿಲುವಳಿ ಸೂಚನೆ- (ಮೊದಲನೇ ಅನುಮತಿ ಕೋರಿಕೆ)

ವಿಷಯ : ಭಾರಿ ಮಳೆ ಹಾನಿಯಿಂದಾಗಿ ಅನೇಕ ಜಿಲ್ಲೆಗಳಲ್ಲಿ ಸಾಕಷ್ಟು ಹಾನಿ ಉಂಟಾಗಿರುವುದು

+ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ) : ಅಧ್ಯಕ್ಷರೆ, ನಾನು ಮತ್ತು ನಮ್ಮ ಪಕ್ಷದ ನಾಯಕರಾದ ಶ್ರೀ ಸಿ. ಬೈರೇಗೌಡರವರು, ಬಚ್ಚೇಗೌಡರವರು ರಾಜ್ಯದಲ್ಲಿ ಮಳೆ ಹಾನಿಯಿಂದ